ಓಂ ಶಾಂತಿ, ಬಾಪ್‌ದಾದಾ  , ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 25-11-2001.

# *ಆಶೀರ್ವಾದಗಳನ್ನು ಕೊಡಿ ಮತ್ತು ಆಶೀರ್ವಾದಗಳನ್ನು ತೆಗೆದುಕೊಳ್ಳಿರಿ, ಕಾರಣದ ನಿವಾರಣೆ ಮಾಡಿ ಸಮಸ್ಯೆಗಳನ್ನು ಪರಿಷ್ಕಾರ ಮಾಡಿರಿ*

(दुआयें दो-दुआयें लो, कारण का निवारण कर, समस्याओं का समाधान करो)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಪ್ರೀತಿಯ ಸಾಗರ ಬಾಪ್‌ದಾದಾ ತನ್ನ ಪ್ರೇಮಸ್ವರೂಪ ಮಕ್ಕಳ ಪ್ರೀತಿಯ ಬಂಧನಕ್ಕೆ ಆಕರ್ಷಿತರಾಗಿ ಮಿಲನ ಮಾಡಲು ಬಂದಿದ್ದಾರೆ. ಮಕ್ಕಳು ಕರೆದರು ಹಾಗೂ ಮಾಲೀಕ ತಂದೆ ಪ್ರತ್ಯಕ್ಷವಾಗಿಬಿಟ್ಟರು. ಅವ್ಯಕ್ತ ಮಿಲನವನ್ನಂತು ಸದಾ ಆಚರಿಸಿಕೊಳ್ಳುತ್ತಲೇ ಇರುತ್ತೀರಿ. ಆದರೆ ಸಾಕಾರದಲ್ಲಿ ಕರೆದಿದ್ದೀರೆಂದು ಬಾಪ್‌ದಾದಾ ಮಕ್ಕಳ ವಿಶಾಲ ಮೇಳದಲ್ಲಿ ತಲುಪಿದ್ದಾರೆ. ಬಾಪ್‌ದಾದಾರವರಿಗೆ ಮಕ್ಕಳ ಸ್ನೇಹ, ಮಕ್ಕಳ ಪ್ರೀತಿಯನ್ನು ನೋಡಿ ಖುಷಿಯಾಗುತ್ತಿದೆ. ಮತ್ತು ಹೃದಯದಿಂದ ನಾಲ್ಕೂ ಕಡೆಯ ಮಕ್ಕಳಿಗೋಸ್ಕರ ಹಾಡನ್ನು ಹಾಡುತ್ತಾರೆ ವಾಹ್! ಶ್ರೇಷ್ಠ ಭಾಗ್ಯವಾನ್ ಮಕ್ಕಳೇ ವಾಹ್! ವಾಹ್! ಭಗವಂತನ ಪ್ರೀತಿಪಾತ್ರ ಆತ್ಮರಾಗಿದ್ದೀರಿ ವಾಹ್! ಇಂತಹ ದೊಡ್ಡ ಭಾಗ್ಯ, ಇಂತಹ ಸಾಧಾರಣ ರೂಪದಲ್ಲಿ ಸಹಜವಾಗಿ ಪ್ರಾಪ್ತಿಯಾಗುವುದೆಂದು ನೀವು ಕನಸಿನಲ್ಲೂ ಸಹ ಯೋಚಿಸಿರಲಿಲ್ಲ. ಆದರೆ ಈ ದಿನ ಸಾಕಾರ ರೂಪದಲ್ಲಿ ಭಾಗ್ಯವನ್ನು ನೋಡುತ್ತಿದ್ದೀರಲ್ಲವೇ, ಬಾಪ್‌ದಾದಾ ನೋಡುತ್ತಿದ್ದಾರೆ ದೂರ ಕುಳಿತಿದ್ದರೂ ಸಹ ಮಿಲನದ ಮೇಳವನ್ನು ಆಚರಿಸುತ್ತಿದ್ದೀರಿ. ಬಾಪ್‌ದಾದಾರವರು ದೂರದಲ್ಲಿರುವವರನ್ನು ನೋಡಿ ಮಿಲನ ಮಾಡುತ್ತಿದ್ದಾರೆ. ಮೆಜಾರಿಟಿ ಮಾತೆಯರಿಗೆ ಗೋಲ್ಡನ್ ಚಾನ್ಸ್ ಸಿಕ್ಕಿದೆ ಮತ್ತು ಬಾಪ್‌ದಾದಾರವರಿಗೂ ಸಹ ವಿಶೇಷ

ಶಕ್ತಿಯ ಸೇನೆಯನ್ನು ನೋಡಿ ಖುಷಿಯಾಗುತ್ತಿದೆ. ಏಕೆಂದರೆ ನಾಲ್ಕು ಗೋಡೆಯ ಮಧ್ಯದಲ್ಲಿದ್ದ ಮಾತೆಯರು ತಂದೆಯ ಮುಖಾಂತರ ವಿಶ್ವ ಕಲ್ಯಾಣಕಾರಿಯಾಗಿ ವಿಶ್ವದ ರಾಜ್ಯಾಧಿಕಾರಿ ಆಗಿಬಿಟ್ಟಿದ್ದೀರಿ. ಆಗಿದ್ದೀರೋ? ಅಥವಾ ಆಗಬೇಕಾಗಿದೆಯೋ? ಆಗಿದ್ದೀರಲ್ಲವೇ? ವಿಶ್ವದ ರಾಜ್ಯಭಾಗ್ಯವೆಂಬ ಬೆಣ್ಣೆಯ ಮುದ್ದೆ ನಿಮ್ಮೆಲ್ಲರ ಕೈಯಲ್ಲಿ ಇದೆ ಅಲ್ಲವೇ! ಬಾಪ್‌ದಾದಾರವರೂ ನೋಡಿದರು, ಯಾರೆಲ್ಲಾ ಮಾತೆಯರು ಮಧುಬನದಲ್ಲಿ ತಲುಪಿದ್ದೀರೋ ಅವರಿಗೆ ಒಂದು ಮಾತಿನ ತುಂಬಾ ಖುಷಿ ಇದೆ. ಅದು ಯಾವುದು? ಏಕೆಂದರೆ ಮಾತೆಯರಿಗೆ ವಿಶೇಷವಾದ ಖುಷಿ ಇದೆಯಲ್ಲವೇ? ನಮ್ಮನ್ನು ಬಾಪ್‌ದಾದಾರವರೇ ವಿಶೇಷವಾಗಿ ಕರೆದಿದ್ದಾರೆ ಎಂದು ನಶೆಯಿಂದ ಹೇಳುತ್ತೀರಲ್ಲವೆ? ಆದ್ದರಿಂದ ಬಾಪ್‌ದಾದಾರವರಿಗೆ ಮಾತೆಯರೊಂದಿಗೆ ವಿಶೇಷವಾದ ಪ್ರೀತಿ ಇದೆಯಲ್ಲವೇ! ಮಾತೆಯರು ನಶೆಯಿಂದ ಹೇಳುತ್ತಾರೆ ಬಾಪ್‌ದಾದಾ ನಮ್ಮನ್ನು ಕರೆದಿದ್ದಾರೆ ಎಂದಾಗ ನಾವೇಕೆ ಬರಬಾರದು! ಬಾಪ್‌ದಾದಾರವರು ಮಕ್ಕಳ ಆತ್ಮಿಕ ವಾರ್ತಾಲಾಪವನ್ನು ಕೇಳುತ್ತಾರೆ, ಖುಷಿಯ ನಶೆಯನ್ನು ನೋಡುತ್ತಾರೆ. ಪಾಂಡವರೂ ಸಹ ಕಡಿಮೆ ಇಲ್ಲ, ಪಾಂಡವರಿಲ್ಲದೇ ವಿಶ್ವದ ಕಾರ್ಯ ಸಮಾಪ್ತಿಯಾಗುವುದಿಲ್ಲ. ಇಂದು ಅಣ್ಣಂದಿರು, ಮಾತೆಯರನ್ನು ವಿಶೇಷವಾಗಿ ಮುಂದಿಟ್ಟಿದ್ದೀರಿ.

ಬಾಪ್‌ದಾದಾ ಎಲ್ಲಾ ಮಕ್ಕಳಿಗೆ ಬಹಳ ಸಹಜ ಪುರುಷಾರ್ಥದ ವಿಧಿಯನ್ನು ಹೇಳುತ್ತಿದ್ದಾರೆ. ಮಾತೆಯರಿಗೆ ಸಹಜವಾಗಿ ಬೇಕಲ್ಲವೇ? ಬಾಪ್‌ದಾದಾ ಇದನ್ನೇ ಎಲ್ಲಾ ಮಾತೆಯರಿಗೆ, ಮಕ್ಕಳಿಗೆ ಹೇಳುತ್ತಾರೆ "ಎಲ್ಲದಕ್ಕಿಂತ ಸಹಜ ಪುರುಷಾರ್ಥದ ಸಾಧನವಾಗಿದೆ- ಕೇವಲ ನಡೆದಾಡುತ್ತಾ, ತಿರುಗಾಡುತ್ತಾ, ಸಂಬಂಧ-ಸಂಪರ್ಕದಲ್ಲಿ ಬರುತ್ತಾ ಪ್ರತಿಯೊಬ್ಬ ಆತ್ಮನಿಗೆ ಹೃದಯದಿಂದ ಶುಭಭಾವನೆಯ ಆಶೀರ್ವಾದವನ್ನು ಕೊಡಿ ಮತ್ತು ಅನ್ಯರಿಂದಲೂ ಆಶೀರ್ವಾದವನ್ನು ಪಡೆದುಕೊಳ್ಳಿರಿ. ಒಂದುವೇಳೆ ನಿಮಗೆ ಯಾರಾದರೂ ಏನಾದರೂ ಕೊಡಲಿ, ಶಾಪ ಕೊಟ್ಟರೂ ಸಹ ನೀವು ಶಾಪವನ್ನು ತನ್ನ ಶುಭಭಾವನೆಯ ಶಕ್ತಿಯಿಂದ ಆಶೀರ್ವಾದವನ್ನಾಗಿ ಪರಿವರ್ತನೆ ಮಾಡಿಕೊಳ್ಳಿರಿ. ನಿಮ್ಮ ಮೂಲಕ ಪ್ರತಿಯೊಬ್ಬ ಆತ್ಮನಿಗೆ ಆಶೀರ್ವಾದದ ಅನುಭವವಾಗಬೇಕು. ಯಾವ ಸಮಯದಲ್ಲಿ ಶಾಪ ಕೊಡುತ್ತಾರೆಯೋ ಆ ಸಮಯದಲ್ಲಿ ಅವರಿಗೆ ನಿಮ್ಮಿಂದ ಆಶೀರ್ವಾದದ ಅನುಭವವಾಗಬೇಕು. ಏಕೆಂದರೆ ಅವರು ಆ ಸಮಯದಲ್ಲಿ ಒಂದಲ್ಲಾ ಒಂದು ವಿಕಾರದ ವಶೀಭೂತರಾಗಿರುತ್ತಾರೆ. ವಶೀಭೂತ ಆತ್ಮನ ಪ್ರತಿ ಅಥವಾ ಪರವಶ ಆತ್ಮರ ಪ್ರತಿ ಎಂದೂ ಶಾಪವನ್ನು ಕೊಡುವುದಿಲ್ಲವಲ್ಲವೇ, ಅವರ ಪ್ರತಿ ಸದಾ ಸಹಯೋಗ ನೀಡುವ ಆಶೀರ್ವಾದ ಬರಲಿ. ಕೇವಲ ಒಂದು ಮಾತನ್ನು ಸದಾ ನೆನಪಿಟ್ಟುಕೊಳ್ಳಿ, ನಾನು ನಿರಂತರ "ಈ ಒಂದೇ ಕಾರ್ಯವನ್ನು ಮಾಡಬೇಕಾಗಿದೆ- ಸಂಕಲ್ಪ, ಮಾತು, ಕರ್ಮ, ಸಂಬಂಧ-ಸಂಪರ್ಕದ ಮೂಲಕ ಆಶೀರ್ವಾದ ಕೊಡುವುದು ಹಾಗೂ ಆಶೀರ್ವಾದ ತೆಗೆದುಕೊಳ್ಳುವುದು." ಒಂದುವೇಳೆ ಯಾವುದೇ ಆತ್ಮನ ಪ್ರತಿ ವ್ಯರ್ಥಸಂಕಲ್ಪ ಅಥವಾ ನೆಗೆಟಿವ್ (ನಕಾರಾತ್ಮಕ) ಸಂಕಲ್ಪ ಬಂದರೂ ಸಹ ಇದನ್ನು ನೆನಪಿಟ್ಟುಕೊಳ್ಳಿ- ನನ್ನ ಕರ್ತವ್ಯ ಏನಾಗಿದೆ ಎಂದು. **ಹೇಗೆ ಬೆಂಕಿ ಆರಿಸುವವರು (ಅಗ್ನಿ ಶಾಮಕದಳ) ಎಲ್ಲಾದರೂ ಬೆಂಕಿ ಬಿದ್ದಾಗ ಬೆಂಕಿಯನ್ನು ನೋಡಿದಾಗ ಅದನ್ನು ಆರಿಸುವ ಕಾರ್ಯವನ್ನು ಅವರು ಮರೆಯುವುದಿಲ್ಲ. ಅವರಿಗೆ ನಾವು ಆರಿಸುವವರು ಎಂಬುದು ಸದಾ ನೆನಪಿರುತ್ತದೆ. ಹಾಗೆಯೇ ಯಾರಾದರೂ ಯಾವುದೇ ವಿಕಾರದ ಕಾರಣ ಕೆಲವೊಂದು ಕಾರ್ಯಗಳನ್ನು ಮಾಡುತ್ತಿದ್ದಾರೆ ಅದನ್ನು ನೋಡಿದಾಗ ಅದು ನಿಮಗೆ ಇಷ್ಟ ಆಗುವುದಿಲ್ಲ, ಆಗಲೂ ನಿಮಗೆ ನಿಮ್ಮ ಕರ್ತವ್ಯದ ನೆನಪು ಇರಲಿ. ಈಗ ನನ್ನ ಕರ್ತವ್ಯ ಏನಾಗಿದೆ. ಈಗ ನಾನು ಆಶೀರ್ವಾದವನ್ನು ಕೊಡುವುದು, ಶುಭಭಾವನೆಯ ಸಹಯೋಗ ಕೊಡುವುದು.** ಕೇವಲ ಒಂದು ಅಕ್ಷರ ನೆನಪಿಟ್ಟುಕೊಳ್ಳಿ, ಮಾತೆಯರು ಆಶೀರ್ವಾದ ಕೊಡುವುದು ಮತ್ತು

ತೆಗೆದುಕೊಳ್ಳುವುದು. ಇದನ್ನು ಮಾಡಲು ಆಗುತ್ತದೆಯಲ್ಲವೇ! ಮಾಡುತ್ತೀರಲ್ಲವೇ ಅಥವಾ ಪಾಂಡವರು ಮಾಡಿದ್ದೀರಲ್ಲವೇ? ಪಾಂಡವರು ಹೇಳುತ್ತಾರೆ ಮಾಡಲೇಬೇಕೆಂದು. ಪಾಂಡವರ ಗಾಯನವಿದೆ ಸದಾ ವಿಜಯೀ. ಮತ್ತು ಶಕ್ತಿಯರು ವಿಶ್ವಕಲ್ಯಾಣಕಾರಿಯೆಂದು ನಿಮ್ಮ ಹೆಸರೇ ಪ್ರಸಿದ್ಧವಾಗಿದೆ.

ಬಾಪ್‌ದಾದಾರವರಿಗೆ ನಾಲ್ಕೂ ಕಡೆಯ ಮಕ್ಕಳಿಂದ ಇದುವರೆಗೂ ಒಂದು ಆಸೆ ಉಳಿದುಕೊಂಡಿದೆ. ಅದು ಯಾವುದೆಂದು ಹೇಳುವುದೇ? ಗೊತ್ತಿದೆಯಾ? ಟೀಚರ್ಸ್ ತಿಳಿದಿದ್ದೀರಲ್ಲವೇ. ಎಲ್ಲಾ ಮಕ್ಕಳು ಯಥಾಶಕ್ತಿ ಪುರುಷಾರ್ಥವನ್ನಂತೂ ಮಾಡುತ್ತಿದ್ದಾರೆ. **ಬಾಪ್‌ದಾದಾರವರು ಮಕ್ಕಳು ಪುರುಷಾರ್ಥವನ್ನು ನೋಡಿ ಮುಗುಳ್ನಗುತ್ತಾರೆ. ಆದರೆ ಒಂದು ಆಸೆ ಇದೆ. ಅದೇನೆಂದರೆ ಪುರುಷಾರ್ಥದಲ್ಲಿ ಈಗ ತೀವ್ರಗತಿ ಇರಬೇಕಾಗಿದೆ. ಪುರುಷಾರ್ಥವಂತೂ ಇದೆ. ಆದರೆ ಈಗ ತೀವ್ರಗತಿಯಲ್ಲಿ ಮಾಡಬೇಕಾಗಿದೆ. ಇದರ ವಿಧಿಯಾಗಿದೆ - ಕಾರಣ ಎಂಬ ಶಬ್ದವು ಸಮಾಪ್ತಿಯಾಗಲಿ, ಮತ್ತು ಸದಾ ನಿವಾರಣಾ ಸ್ವರೂಪರಾಗಬೇಕು. ಕಾರಣವಂತೂ ಸಮಯನುಸಾರವಾಗಿ ಬರುತ್ತಲೇ ಇರುತ್ತದೆ. ಮುಂದೆಯೂ ಆಗುತ್ತದೆ. ಆದರೆ ನೀವು ಮಕ್ಕಳು ನಿವಾರಣಾ ಸ್ವರೂಪರಾಗಿ. ಏಕೆಂದರೆ ನೀವೆಲ್ಲಾ ಮಕ್ಕಳು ವಿಶ್ವದ ಕಾರಣವನ್ನು ನಿವಾರಣೆ ಮಾಡಿ ಎಲ್ಲಾ ಮೆಜಾರಿಟಿ ಆತ್ಮರನ್ನು ನಿರ್ವಾಣಧಾಮಕ್ಕೆ ಕಳುಹಿಸಬೇಕಾಗಿದೆ. ಸ್ವಯಂನ್ನು ನಿವಾರಣಾ ಸ್ವರೂಪರನ್ನಾಗಿ ಮಾಡಿಕೊಂಡಾಗ ವಿಶ್ವದ ಆತ್ಮರನ್ನು ನಿವಾರಣಾ ಸ್ವರೂಪದ ಮೂಲಕ ಎಲ್ಲಾ ಸಮಸ್ಯೆಗಳಿಂದ ನಿವಾರಣೆ ಮಾಡಿ ನಿರ್ವಾಣಧಾಮಕ್ಕೆ ಕಳುಹಿಸಬಹುದಾಗಿದೆ. ಈಗ ವಿಶ್ವದ ಆತ್ಮರು ಮುಕ್ತಿಯನ್ನು ಬಯಸುತ್ತಾರೆ. ತಂದೆಯ ಮೂಲಕ ಮುಕ್ತಿಯ ಆಸ್ತಿಯನ್ನು ಕೊಡಿಸುವಂತಹವರು ತಾವು ನಿಮಿತ್ತ ಮಕ್ಕಳೇ ಆಗಿದ್ದೀರಿ. ನಿಮಿತ್ತ ಆತ್ಮರೂ ಮೊದಲು ಸ್ವಯಂನ ಭಿನ್ನ ಸಮಸ್ಯೆಗಳ ಕಾರಣವನ್ನು ನಿವಾರಣೆ ಮಾಡಿ, ತನ್ನನ್ನು ಮುಕ್ತರನ್ನಾಗಿ ಮಾಡಿಕೊಂಡಾಗಲೇ ವಿಶ್ವಕ್ಕೆ ಮುಕ್ತಿಯ ಆಸ್ತಿ(ವಾರಸತ್ವ)ಯನ್ನು ಕೊಡಲು ಸಾಧ್ಯವಾಗುತ್ತದೆ. ಮುಕ್ತರಾಗಿದ್ದೀರಾ? ಯಾವುದೇ ಪ್ರಕಾರದ ಸಮಸ್ಯೆಯ ಕಾರಣ ಮುಂದೆ ಬರದೇ ಇರಲಿ, ಈ ಕಾರಣ ಇದೆ, ಆ ಕಾರಣವಿದೆ ಎಂದು. ಕಾರಣವು ಸಮ್ಮುಖದಲ್ಲಿ ಬಂದಾಗ ಆ ಕಾರಣಕ್ಕೆ ಒಂದು ಸೆಕೆಂಡಿನಲ್ಲಿ ನಿವಾರಣೆಯನ್ನು ಯೋಚನೆ ಮಾಡಿ. ವಿಶ್ವದ ನಿವಾರಣೆಯನ್ನೇ ಮಾಡಲಾದಾಗ ನನ್ನ ಸಣ್ಣ ಸಣ್ಣ ಕಾರಣಗಳನ್ನು ನಿವಾರಣೆ ಮಾಡಲಾಗುವುದಿಲ್ಲವೇ ಎಂದು ಯೋಚಿಸಿ. ಮಾಡಲಾಗುವುದಿಲ್ಲವೇ? ಈಗಂತೂ ಆತ್ಮರ ಕ್ಯೂ ತಮ್ಮ ಮುಂದೆ ಬರುತ್ತದೆ- ಹೇ ಮುಕ್ತಿಧಾತ! ಮುಕ್ತಿಯನ್ನು ನೀಡಿ ಎಂದು ಕೇಳುತ್ತಾರೆ. ಏಕೆಂದರೆ ನೀವು ಮುಕ್ತಿಧಾತನ ಡೈರೆಕ್ಟ್ ಮಕ್ಕಳು, ಅಧಿಕಾರಿ ಮಕ್ಕಳಾಗಿದ್ದೀರಿ.** ಮಾಸ್ಟರ್ ಮುಕ್ತಿದಾತರಲ್ಲವೇ? ಆದರೆ ನಿಮ್ಮ ಮುಂದೆ ಕ್ಯೂ (ಏಕೆ? ಏನು?) ಎನ್ನುವ ಒಂದು ಅಡಚಣೆಯ ಬಾಗಿಲು ಮುಚ್ಚಿದೆ, ಕ್ಯೂ (ಏಕೆ?) ಎನ್ನುವ ಕ್ಯೂ ತಯಾರಾಗಿಬಿಟ್ಟಿದೆ. ಪುರುಷಾರ್ಥದಲ್ಲಿ ಈ ಏಕೆ ಎನ್ನುವ ಶಬ್ದದ ಬಾಗಿಲು ಮುಚ್ಚಿದೆ. ಇದರಿಂದಲೇ ಅನೇಕ ಕ್ಯೂ ಅನ್ನು ಜೊತೆ ತರುತ್ತದೆ. ಆದ್ದರಿಂದ ಬಾಪ್‌ದಾದಾ ಈಗ ದೇಶ ವಿದೇಶದ ಎಲ್ಲಾ ಮಕ್ಕಳಲ್ಲಿ ಈ ಸ್ಮೃತಿಯನ್ನು ತರಿಸುತ್ತಿದ್ದಾರೆ- ನೀವು ಸಮಸ್ಯೆಗಳ ಏಕೆ? ಎಂಬ ಕ್ಯೂಅನ್ನು ಸಮಾಪ್ತಿ ಮಾಡಿ. ಮಾಡಲಾಗುತ್ತದೆಯೇ? ಟೀಚರ್ಸ್ ಮಾಡುತ್ತೀರಾ? ಪಾಂಡವರು ಮಾಡಲಾಗುತ್ತದೆಯೇ? ಕೈ ಎತ್ತಿ....ಎಲ್ಲರೂ ಕೈಯನ್ನು ಎತ್ತಿದ್ದೀರಾ? ಅಥವಾ ಕೆಲವರೋ? ಈ ಫಾರಿನರ್ಸ್ ಎತ್ತುತ್ತಿಲ್ಲ. ಭಾಷೆಯ ಅನುವಾದ ಅಂತ್ಯದಲ್ಲಿ ಆಗುತ್ತದೆ. ವಿದೇಶದವರು ತಯಾರಾಗಿದ್ದೀರಾ? ಹೌದೋ ಅಥವಾ ಇಲ್ಲವೋ? ಹೌದು ಎಂದರೆ ಸೀದಾ ಕೈ ಎತ್ತಿ, ಅರ್ಧ ಅಲ್ಲ ಸೀದಾ ಕೈ ಎತ್ತಿ. ಈಗ ಯಾವುದೇ ಸೇವಾಕೇಂದ್ರದಲ್ಲಿ ಯಾವುದೇ ಸಮಸ್ಯೆಯ ಹೆಸರು ಇರಬಾರದು. ಈ ರೀತಿ ಇರಲು ಸಾಧ್ಯವೇ? ಯಾವುದೇ ಸಮಸ್ಯೆ ಇರಬಾರದು. ಮುಂದಿನ ಸಾಲಿನಲ್ಲಿ

ಕುಳಿತಿರುವವರು ಹೇಳಿ ಸಾಧ್ಯವೇ? ಮೋಹಿನಿ... ಮುನ್ನಿ.... ಹೇಳಿ ಸಾಧ್ಯವಿದೆಯೇ? ಪ್ರತಿಯೊಬ್ಬರು ನಾನು ಮಾಡಬೇಕು ಎಂದು ಎಲ್ಲರೂ ನಿಶ್ಚಯ ಮಾಡಬೇಕಲ್ಲವೇ. ಟೀಚರ್ಸ್ ನಾನು ಮಾಡಬೇಕು ಎಂದು, ಸ್ಟೂಡೆಂಟ್ಸ್, ಪ್ರವೃತ್ತಿಯವರು ನಾವು ಮಾಡಬೇಕೆಂದು, ಮಧುಬನದಲ್ಲಿರುವವರು ತಿಳಿಯಿರಿ ನಾವು ಮಾಡಬೇಕು ಎಂದು. ಎಲ್ಲಾ ಸಮಸ್ಯೆಗಳನ್ನು ಸಮಾಪ್ತಿ ಮಾಡಲು ಸಾಧ್ಯವೆಂದು ಮಧುಬನದವರು ಕೈ ಎತ್ತಿ. ನಿಮಗೆ ಒಳ್ಳೆಯ ಜಾಗ ಸಿಕ್ಕಿದೆ ಏಕೆಂದರೆ ನೀವು ಅಧಿಕಾರಿಗಳಾಗಿದ್ದೀರಲ್ಲವೇ? ಮುಂದಿನ ಸಾಲಿನವರು ಕೈ ಎತ್ತಿ? ಸಮಸ್ಯೆ ಎಂಬ ಶಬ್ದವೇ ಸಮಾಪ್ತಿಯಾಗಬೇಕು. ಕಾರಣ ಸಮಾಪ್ತಿಯಾಗಿ ನಿವಾರಣೆ ಎನ್ನುವ ಶಬ್ದ ಬರಲಿ. ಸಾಧ್ಯವಿದೆಯೇ? ಏನು ಇದು ಸಾಧ್ಯವಿಲ್ಲವೇ? ಯಾವಾಗ? ಮೊದಮೊದಲು ಸ್ಥಾಪನೆಯ ಸಮಯದಲ್ಲಿ ಎಲ್ಲಾ ಬಂದಂತಹ ಮಕ್ಕಳು ಏನು ಪ್ರತಿಜ್ಞೆ ಮಾಡಿದ್ದೀರಿ. ಮಾಡಿ ತೋರಿಸಿದಿರಿ, ಅಸಂಭವವನ್ನು ಸಂಭವವನ್ನಾಗಿ ಮಾಡಿ ತೋರಿಸಿದಿರಿ. ಎಷ್ಟು ಸಮಯವಾಯಿತು. 65 ವರ್ಷಗಳಿಂದ ಅಸಂಭವವನ್ನು ಸಂಭವ ಮಾಡಲಾಗುವುದಿಲ್ಲವೆ? ಮುಖ್ಯ ಟೀಚರ್ಸ್ ಕೈ ಎತ್ತಿ. ಪಾಂಡವರು ಏಕೆ ಕೈ ಎತ್ತಿಲ್ಲ, ಅಗುವುದಿಲ್ಲವೇ? ಸಂಶಯವೇ? ಸ್ವಲ್ಪ ಯೋಚಿಸುತ್ತಿದ್ದಾರೆ. ಯೋಚಿಸಬೇಡಿ, ಮಾಡಲೇಬೇಕಾಗಿದೆ. ಬೇರೆಯವರದನ್ನು ಯೋಚಿಸಬೇಡಿ, ಪ್ರತಿಯೊಬ್ಬರು ತನ್ನದನ್ನು ಯೋಚಿಸಿ. ತನ್ನದನ್ನು ಯೋಚಿಸಬಹುದಲ್ಲವೇ? ನಾನು ಸಮಸ್ಯೆ ಇಲ್ಲದೇ ಇರುತ್ತೇನೆ ಎಂದು ತಮ್ಮದನ್ನು ಯೋಚಿಸಿ ತಮಗಾಗಿ ಧೈರ್ಯ(ಸಾಹಸ) ಇಡಬಹುದಲ್ಲವೇ? ಅಥವಾ ಇಲ್ಲವೋ? ಫಾರಿನರ್ಸ್ ಧೈರ್ಯ ಮಾಡುತ್ತೀರಲ್ಲವೇ? ಅಭಿನಂದನೆಗಳು, ಒಳ್ಳೆಯದು ಕೈ ಎತ್ತಿ, ಬೇರೆಯವರನ್ನು ನೋಡಿ ಕೈ ಎತ್ತಬೇಡಿ, ಹೃದಯಪೂರ್ವಕವಾಗಿ ಕೈ ಎತ್ತಿ. ಎಲ್ಲರೂ ಕೈ ಎತ್ತುತ್ತಿದ್ದಾರೆ ಆದ್ದರಿಂದಲೇ ನಾನೂ ಎತ್ತಿದೆ ಎಂಬುವಂತಾಗಬಾರದು. ಕಾರಣವನ್ನು ಸಮಾಪ್ತಿ ಮಾಡಿ ನಿವಾರಣಾ ಸ್ವರೂಪವಾಗಲೇಬೇಕು ಎಂದು ಮನಸ್ಸಿನಲ್ಲಿ ದೃಢಸಂಕಲ್ಪ ಮಾಡಿರಿ. ಏನೇ ಆದರೂ, ಸಹನೆ ಮಾಡಬೇಕಾಗಿ ಬಂದರೂ, ಎದುರಿಸಬೇಕಾಗಿ ಬಂದರೂ, ಪರಸ್ಪರ ಸಂಬಂಧ-ಸಂಪರ್ಕದಲ್ಲಿ ಸಹಿಸಬೇಕಾಗಿ ಬಂದರೂ, ಏನೇ ಆಗಲಿ ಏನೇ ಬಂದರೂ ಸಮಸ್ಯಾ ಸ್ವರೂಪರಾಗಬಾರದು. ಸಾಧ್ಯವಿದೆಯೇ? ಒಂದುವೇಳೆ ದೃಢ ನಿಶ್ಚಯವಿದ್ದರೆ ಅವರು ಕೊನೆಯಿಂದ ಮೊದಲವರೆಗೆ ಕೈ ಎತ್ತಿ. (ಬಾಪ್‌ದಾದಾರವರು ಎಲ್ಲರನ್ನೂ ಕೈ ಎತ್ತಿಸಿದರು, ಟಿ.ವಿಯಲ್ಲಿ ದೃಶ್ಯವನ್ನು ನೋಡಿದರು) ಒಳ್ಳೆಯದು ಎಕ್ಸರ್ಸೈಜ್ ಆಯಿತಲ್ಲವೆ. ಕೈಯನ್ನು ಏಕೆ ಎತ್ತಿಸುತ್ತಿದ್ದಾರೆಂದರೆ ಹೇಗೆ ಒಬ್ಬರನ್ನೊಬ್ಬರನ್ನು ನೋಡಿ ಕೈ ಎತ್ತಲು ಉತ್ಸಾಹ ಬರುತ್ತದೆಯಲ್ಲವೇ! ಹಾಗೆಯೇ ಸಮಸ್ಯೆ ಬಂದಾಗ ಮುಂದೆ ಬಾಪ್‌ದಾದಾರವರನ್ನು ನೋಡಿ, ಮನ ತುಂಬಿ ಹೇಳಿ ಬಾಬಾ ಎಂದು. ಬಾಬಾ ಪ್ರತ್ಯಕ್ಷವಾಗಿಬಿಡುತ್ತಾರೆ ಆಗ ನಿಮ್ಮ ಸಮಸ್ಯೆ ದೂರವಾಗಿಬಿಡುತ್ತದೆ. ಮಾಸ್ಟರ್ ಸರ್ವಶಕ್ತಿವಾನ್ ಎಂಬ ನಿಮ್ಮ ಟೈಟಲನ್ನು ಸದಾ ನೆನಪು ಮಾಡಿ. ಇಲ್ಲವೆಂದರೆ ಬಾಪ್‌ದಾದಾ ಮಾಸ್ಟರ್ ಸರ್ವಶಕ್ತಿವಾನ್ ಎನ್ನುವ ಬದಲು ನೆನಪು, ಪ್ರೀತಿಯಲ್ಲಿ ಕೇವಲ ಶಕ್ತಿವಾನ್ ಎಂದು ಹೇಳುವುದೇ? ಇದು ಚೆನ್ನಾಗಿರುವುದಿಲ್ಲ ತಾನೆ? ಮಾಸ್ಟರ್ ಸರ್ವಶಕ್ತಿವಾನ್ ಮಕ್ಕಳು ಏನು ಮಾಡಲು ಸಾಧ್ಯವಿಲ್ಲ. ನಿಮ್ಮ ಟೈಟಲನ್ನು ಸದಾ ನೆನಪಿಟ್ಟುಕೊಳ್ಳಿರಿ. ಮಾಸ್ಟರ್ ಸರ್ವಶಕ್ತಿವಾನ್ ಎಂದರೆ ವಿಶ್ವವನ್ನು ಕಲ್ಯಾಣ ಮಾಡುವುದಾಗಿದೆ. ತಮ್ಮ ಟೈಟಲ್ ಮತ್ತು ಕರ್ತವ್ಯವನ್ನು ನೆನಪಿಟ್ಟುಕೊಂಡರೆ ಶಕ್ತಿಗಳು ತಾನಾಗಿಯೇ ಬರುತ್ತವೆ. ನೀವು ಶಕ್ತಿಗಳ ಮೇಲೂ ಸಮಯಾನುಸಾರ ಆದೇಶವನ್ನು ಮಾಡಿರಿ. ಶಕ್ತಿಯನ್ನು ನೀವು ಧಾರಣೆ ಮಾಡುತ್ತೀರಿ ಆದರೆ ನೀವು ಮಾಡುವ ತಪ್ಪು ಏನೆಂದರೆ ಸಮಯಕ್ಕೆ ಸರಿಯಾಗಿ ಉಪಯೋಗಿಸುವುದರ ಬದಲು ಸಮಯ ಮುಗಿದ ಮೇಲೆ ಉಪಯೋಗಿಸುತ್ತೀರಿ. ನಂತರ ಯೋಚಿಸುತ್ತೀರಿ ಹೀಗೆ ಮಾಡಬೇಕಿತ್ತಲ್ಲವೇ ಎಂದು. ಹೇಗಾದರೆ ನಿಮ್ಮ ಕರ್ಮೇಂದ್ರಿಯಗಳನ್ನು ನಿಮ್ಮ ಆಜ್ಞೆಯ

ಪ್ರಮಾಣ ಉಪಯೋಗಿಸುತ್ತೀರಿ. ಕಾಲನ್ನು, ಕೈಯನ್ನು ಹೇಗೆ ಬೇಕೋ ಹಾಗೆ ಆಡಿಸುತ್ತೀರಲ್ಲವೇ? ಹಾಗೆಯೇ ಎಲ್ಲಾ ಶಕ್ತಿಗಳನ್ನು ಸಮಯಾನುಸಾರ ಕಾರ್ಯದಲ್ಲಿ ಉಪಯೋಗಿಸಿದಾಗ ಆ ಶಕ್ತಿಗಳು ಸಮಯಾನುಸಾರ ತಮ್ಮ ಕೆಲಸವನ್ನು ಮಾಡುತ್ತವೆ. ಶಕ್ತಿಯನ್ನು ತುಂಬಿಕೊಳ್ಳುತ್ತೀರಿ ಆದರೆ ಸಮಯಾನುಸಾರ ಶಕ್ತಿಯನ್ನು ಕಡಿಮೆ ಉಪಯೋಗಿಸುತ್ತೀರಿ. ಆ ಸಮಯಕ್ಕೆ ಕಾರ್ಯದಲ್ಲಿ ಉಪಯೋಗಿಸುವುದರಿಂದ ಶಕ್ತಿ ತನ್ನ ಕಾರ್ಯವನ್ನು ಖಂಡಿತ ಮಾಡುತ್ತದೆ. ಕೆಲವೊಮ್ಮೆ ಕೆಲವು ಮಕ್ಕಳ ಮುಖ ಈ ರೀತಿ ಕಾಣುತ್ತದೆ. ಹೆಚ್ಚು ಯೋಚನೆ ಮಾಡುವುದರಲ್ಲಿ ಗಂಭೀರವಾಗಿ ಕಾಣುತ್ತಾರೆ. ಅದಕ್ಕೆ ಬಾಬಾ ಹೇಳುತ್ತಾರೆ ಖುಷಿಯಿಂದ ಇರಿ, ಹಾಡಿರಿ, ಕುಣಿಯಿರಿ. ನಿಮ್ಮ ಬ್ರಾಹ್ಮಣ ಜೀವನವೇ ಖುಷಿಯಿಂದ ನೃತ್ಯ ಮಾಡುವುದಾಗಿದೆ ಮತ್ತು ತಮ್ಮ ಭಾಗ್ಯ ಹಾಗೂ ಭಗವಂತನ ಗೀತೆಯನ್ನು ಹಾಡುವುದಕ್ಕಾಗಿಯೇ ಇದೆ. ಖುಷಿಯಲ್ಲಿ ನೃತ್ಯ ಮಾಡುವವರು ಗಂಭೀರವಾಗಿದ್ದರೆ ನೋಡುವವರು ಇವರಿಗೆ ನೃತ್ಯ ಮಾಡಲು ಬರುವುದಿಲ್ಲವೆಂದು ತಿಳಿಯುತ್ತಾರೆ. ಗಂಭೀರತೆ ಒಳ್ಳೆಯದೇ ಆದರೆ ಅತಿ ಹೆಚ್ಚಿನ ಗಂಭೀರತೆ ಸ್ವಲ್ಪ ಯೋಚನೆ ಮಾಡುವಂತಹದಾಗಿರುತ್ತದೆ. ಬಾಪ್‌ದಾದಾರವರು ಈಗ ದೆಹಲಿ ಉದ್ಘಾಟನೆ ಆಗುತ್ತದೆ ಎಂದು ಕೇಳಿಸಿಕೊಂಡರು. (9 ಡಿಸೆಂಬರ್ 2001 ರಂದು ದೇಹಲಿಯ ಗುಡಗಾಂವನಲ್ಲಿ ಓಂ ಶಾಂತಿ ರಿಟ್ರೀಟ್ ಸೆಂಟರ್ನ ಉದ್ಘಾಟನೆಯಿದೆ). ಆದರೆ ಬಾಪ್‌ದಾದಾ ಯಾವ ಉದ್ಘಾಟನೆಯನ್ನು ನೋಡಲು ಬಯಸುತ್ತಾರೆ? ಸಣ್ಣ-ಪುಟ್ಟ ಉದ್ಘಾಟನೆಯಂತೂ ಆಗುತ್ತಲೇ ಇರುತ್ತದೆ, "ವಿಶ್ವದ ಸ್ಟೇಜ್ನ ಮೇಲೆ ಎಲ್ಲರೂ ತಂದೆಯ ಸಮಾನ ಸೂಕ್ಷ್ಮ ದೇವತೆಯಾಗಿ ಮುಂದೆ ಬರಬೇಕು. ಹಾಗೂ ಪರದೆ ತೆರೆಯಬೇಕು" ಇಂತಹ ಉದ್ಘಾಟನೆ ಚೆನ್ನಾಗಿರುತ್ತದೆಯಲ್ಲವೇ? ಮಕ್ಕಳಾದ ನಿಮ್ಮ ಆತ್ಮಿಕ ವಾರ್ತಾಲಾಪವನ್ನು ಬಾಬಾರವರು ಕೇಳುತ್ತಾ ಇರುತ್ತಾರೆ. ಬಾಬಾರವರಿಗೆ ಇದೇ ಇಚ್ಛೆ ಇದೆ- ಮಕ್ಕಳಾದ ನೀವು ಈಗ ಬಾಬಾರವರನ್ನು ಪ್ರತ್ಯಕ್ಷ ಮಾಡಬೇಕು. ವಿಶ್ವದ ಸ್ಟೇಜ್ ನ ಮೇಲೆ ಮಕ್ಕಳು ಮೊದಲು ಪ್ರತ್ಯಕ್ಷವಾಗಬೇಕು ಎನ್ನುವುದು, ತಂದೆಯು ಮಕ್ಕಳ ಜೊತೆ ಪ್ರತ್ಯಕ್ಷ ಆಗುವ ಈ ಉದ್ಘಾಟನೆಯನ್ನು ನೋಡಲು ಬಾಬಾ ಬಯಸುತ್ತಾರೆ. ಉತ್ಸಾಹ ಉಲ್ಲಾಸವಂತೂ ಚೆನ್ನಾಗಿದೆ. ಆತ್ಮಿಕ ವಾರ್ತಾಲಾಪ ಮಾಡುವಾಗ ಎಲ್ಲರ ಉತ್ಸಾಹ ಹೆಚ್ಚಾಗಿರುತ್ತದೆ. ಆದರೆ ಕರ್ಮಯೋಗಿ ಆಗುವಾಗ ಸ್ವಲ್ಪ ವ್ಯತ್ಯಾಸವಾಗಿಬಿಡುತ್ತದೆ. ಮಾತೆಯರು ಏನು ಮಾಡುತ್ತೀರಿ? ಮಾತೆಯರದು ಬಹಳ ದೊಡ್ಡ ಗುಂಪು ಇದೆ. ಮಾತೆಯರನ್ನು ನೋಡಿ ಬಾಪ್‌ದಾದಾರವರಿಗೆ ಬಹಳ ಖುಷಿ ಆಗುತ್ತದೆ. ಯಾರೂ ಕೂಡ ಮಾತೆಯರನ್ನು ಇಷ್ಟು ಮುಂದೆ ತಂದಿಲ್ಲ. ಆದರೆ ಬಾಪ್‌ದಾದಾ ಮಾತೆಯರು ಬಹಳ ಮುಂದುವರೆಯುವುದನ್ನು ನೋಡಿ ಬಹಳ ಖುಷಿಪಡುತ್ತಾರೆ. ಮಾತೆಯರದು ಒಂದು ವಿಶೇಷವಾದ ಸಂಕಲ್ಪವಿದೆ. ಯಾರು ಮಾಡದೇ ಇರುವುದನ್ನು ನಾವು ಮಾತೆಯರು ತಂದೆಯ ಜೊತೆ ಇದ್ದು ಮಾಡಿ ತೋರಿಸುತ್ತೇವೆ. ಮಾತೆಯರು ಏನು ತಾನೇ ಮಾಡಲು ಸಾಧ್ಯವಿಲ್ಲ? ಮಾತೆಯರಲ್ಲಿ ಉತ್ಸಾಹ ಉಲ್ಲಾಸವೂ ಬಹಳ ಚೆನ್ನಾಗಿದೆ. ಏನೂ ಅರ್ಥ ಆಗದಿದ್ದರೂ ಸಹ ನಾನು ಬಾಬಾರವರ ಮಗು, ಬಾಬಾ ನನ್ನವರು.... ನನ್ನ ಬಾಬಾ ಎಂದು ಹೇಳುತ್ತೀರಲ್ಲವೇ? ನನ್ನ ಬಾಬಾ ಎನ್ನುವ ಗೀತೆಯನ್ನು ಹಾಡುತ್ತಾ ಇರಿ.

ಒಳ್ಳೆಯದು, ಟೀಚರ್ಸ್ ಕೈಯನ್ನು ಎತ್ತಿರಿ. ಬಹಳಷ್ಟು ಜನ ಟೀಚರ್ಸ್ ಬಂದಿದ್ದಾರೆ. (1300 ಜನ ಟೀಚರ್ಸ್) ಮಾತೆಯರನ್ನು ಚೆನ್ನಾಗಿ ಕರೆದುಕೊಂಡು ಬಂದಿದ್ದೀರಲ್ಲವೇ, ನಿಮಗೆ ಲಾಭವೇ ಆಗಿದೆ ಅಲ್ಲವೇ. ಅವರನ್ನು ಕರೆತಂದಿದ್ದೀರಿ ಅರ್ಥಾತ್ ನಿಮ್ಮ ಪುಣ್ಯದ ಖಾತೆಯನ್ನು ಜಮಾ ಮಾಡಿಕೊಂಡಿದ್ದೀರಿ. ನಿಮಗೆ ಲಾಭವೇ ಆಗಿದೆ ಅಲ್ಲವೇ. ನಿಮ್ಮ ಪುಣ್ಯದ ಖಾತೆಯು ಹೆಚ್ಚಾಗಿದೆ, ಒಳ್ಳೆಯದು. ಭಲೇ ಬನ್ನಿರಿ. ಇನ್ನು ಮದುಬನ ನಿವಾಸಿಯರು, ಈ ಸಭೆಯಲ್ಲಿ ಇರುವ

ಕುಮಾರಿಯರು ಕೈಯನ್ನು ಎತ್ತಿರಿ. ಕುಮಾರಿಯರು ಬಹಳಷ್ಟು ಜನರಿದ್ದೀರಿ. ಕುಮಾರಿಯರಂತೂ ಅದ್ಭುತವನ್ನು ಮಾಡಿ ತೋರಿಸುವವರು. ತೋರಿಸುವವರೇ ತಾನೇ? ಕುಮಾರಿಯರಿಗೆ ವಿಶೇಷ ಅದೃಷ್ಟವು ಲಭಿಸಿದೆ. ಪಾಂಡವರು ನಗುತ್ತಿದ್ದಾರೆ, ನಿಂದಿಸುತ್ತಿದ್ದಾರೆ. ಕುಮಾರಿಯರು ಸೇವಾ ಕೇಂದ್ರದಲ್ಲಿದ್ದರೆ ದೀದಿ, ದೀದೀ ಎಂದು ಕರೆಯುತ್ತಾರೆ. ಪಾಂಡವರನ್ನು ದಾದಾ ಎಂದು ಕರೆಯುವುದಿಲ್ಲ ಎಂದು. ಅರ್ಥಾತ್ ನೋಡಿ, ಕುಮಾರಿಯರಿಗೆ ವಿಶೇಷವಾಗಿ ಮನಸ್ಸಿನಿಂದ ಸಮರ್ಪಣೆಯಾದಾಕ್ಷಣ ಬಾಪ್‍ದಾದಾರವರ ಮುರಳಿ ತಿಳಿಸುವ ಸಿಂಹಾಸನವು ಲಿಫ್ಟ್‌ನಂತೆ ಲಭಿಸುತ್ತದೆ. ಈ ಸಿಂಹಾಸನ ಕಡಿಮೆಯಾದುದಲ್ಲ. ಪಾಂಡವರೂ ಸಹ ಮುರಳಿ ಹೇಳುತ್ತಾರೆ. ಆದರೆ ಹೆಚ್ಚು ಜನ ಅಕ್ಕಂದಿರೇ ಅರ್ಥಾತ್ ಇದು ಕುಮಾರಿಯರ ಅದೃಷ್ಟವಾಗಿದೆ. ಈ ಬಹುಮಾನವನ್ನು ಎಷ್ಟು ಬೇಕೆಂದರೆ ಅಷ್ಟು ಕುಮಾರಿಯರು ಪಡೆಯಬಹುದು. ಒಳ್ಳೆಯದು. ಕುಮಾರರು ಎಷ್ಟು ಜನ? ಕುಮಾರರೂ ಸಹ ಕಡಿಮೆ ಏನಲ್ಲ. ಕುಮಾರರೂ ಈಗ ಒಳ್ಳೆಯ ಕುಮಾರರಾಗಿ ಬಿಟ್ಟಿದ್ದಾರೆ. ಕುಮಾರರಿಲ್ಲದೇ ಸೇವಾ ಕೇಂದ್ರವು ನಡೆಯುವುದಿಲ್ಲ. ಟೀಚರ್ಸ್ ಹೇಳಿರಿ ಕುಮಾರರು ಇಲ್ಲದೆ ಸೇವಾ ಕೇಂದ್ರವು ನಡೆಯುತ್ತದೆಯೇ? ನಡೆಯುವುದಿಲ್ಲ. ಕುಮಾರರ ಒಂದು ಒಳ್ಳೆಯ ವಿಶೇಷತೆ ಇದೆ. ಕುಮಾರರು ಯಾವ ದೃಢಸಂಕಲ್ಪವನ್ನಾದರೆ ಮಾಡುತ್ತಾರೆಯೋ ಅದನ್ನು ಪ್ರತ್ಯಕ್ಷದಲ್ಲಿ ತರಬಲ್ಲರು. ಆದರೆ ಒಳ್ಳೆಯ ಕುಮಾರರು ವಿರುದ್ಧವಾದ ವಿಷಯಗಳನ್ನು ಮಾಡುವುದಿಲ್ಲ. ಸರಿಯಾದವುಗಳನ್ನೇ ಮಾಡುತ್ತಾರೆ ಯಾವುದು ಬೇಕೆಂದರೆ ಅದನ್ನು ಮಾಡಬಲ್ಲ ದೃಢ ಸಂಕಲ್ಪದ ಬಹುಮಾನವು ಕುಮಾರರಿಗೆ ಲಭಿಸಿದೆ. ಇದು ಬಹುಮಾನ ಆದರೆ ಇದನ್ನು ಉಪಯೋಗಿಸುವುದು ನಿಮ್ಮ ಕೈಯಲ್ಲಿಯೇ ಇದೆ. ಒಳ್ಳೆಯ ಕುಮಾರರ ಅತಿ ದೊಡ್ಡ ಗ್ರೂಪ್ ತಯಾರಾಗಬೇಕು ಎಂದು ಸರ್ಕಾರದವರು ಸಹ ಯೋಚಿಸುತ್ತಿದ್ದಾರೆ. ಇಡೀ ವಿಶ್ವದಲ್ಲಿ ಕುಮಾರರ ಗ್ರೂಪ್ ಮಧುಬನಕ್ಕೆ ಬರಬೇಕು. ಪ್ರಧಾನಮಂತ್ರಿ, ಮಂತ್ರಿಗಳು ಇಲ್ಲಿಗೇ ಬರಬೇಕು. ಬರಲಾಗುತ್ತದೆಯೇ? ಒಳ್ಳೆಯದು. ಕುಮಾರರು ತಮ್ಮ ಘನತೆಯನ್ನು ತೋರಿಸಬಲ್ಲರು. ಅಲ್ಲಿಯವರು, ಇಲ್ಲಿಯವರು ಹೀಗೆ ಎಲ್ಲಾ ದೇಶದವರು ಬರಬೇಕು. ಆಹ್ವಾನವನ್ನು ಕಳುಹಿಸಬೇಕು. ಇದಕ್ಕೆ ದಿನಾಂಕವನ್ನು ನಿರ್ಣಯಿಸಿರಿ. ಕುಮಾರರ ಮೇಲೆ ಬಾಪ್‍ದಾದಾರವರಿಗೆ ಬಹಳ ಬಹಳ ಬಹಳಷ್ಟು ಶುಭ ಆಸೆಗಳು ಇವೆ ಮತ್ತು ಆ ಇಚ್ಛೆಗಳು ಪೂರ್ತಿ ಆಗಲೇಬೇಕು, ಒಳ್ಳೆಯದು.

(ಎರಡು ತಿಂಗಳ ಯಾತ್ರೆ ಮಾಡಿರುವವರು ಬಂದಿದ್ದಾರೆ) ಆದ್ದರಿಂದಲೇ ಇಷ್ಟು ಜನ ಮಾತೆಯರು ಬಂದಿದ್ದಾರೆ. ಮೂರು ಪಟ್ಟಿನಷ್ಟರ ಕೋಣೆಯು ಮಾತೆಯರಿಂದಲೇ ತುಂಬಿಬಿಟ್ಟಿದೆ. 13,000 ಜನ ಮಾತೆಯರು ಬಂದಿದ್ದಾರೆ ಮಾತೆಯರು ಕೈಯನ್ನು ಎತ್ತಿರಿ. ಬಹಳಷ್ಟು ಜನರಿದ್ದಾರೆ. ಇಡೀ ಹಾಲ್ ಗೆ ಮಾತೆಯರಿಂದಲೇ ಶೋಭೆ ಬಂದಿದೆ. ಯಾತ್ರೆಗೆ ಹೋಗಿರುವ ಮಾತೆಯರು, ಕನ್ಯೆಯರು ಎದ್ದು ನಿಲ್ಲಿರಿ. ಸ್ವಲ್ಪ ಜನ ಬಂದಿದ್ದಾರೆ .ಉಳಿದವರಿಗೆ ಸ್ಮೃತಿ ತಲುಪುತ್ತದೆ. ಬಾಪ್‍ದಾದಾ ಅವರನ್ನು ಟಿ.ವಿಯಲ್ಲಿ ನೋಡುತ್ತಿದ್ದಾರೆ. ಅವರೆಲ್ಲರಿಗೂ ಸಹ ಧನ್ಯವಾದಗಳು. ಪ್ರವೃತ್ತಿಯಲ್ಲಿ ಇರುವ ಅಧರ್ ಕುಮಾರರು ಕೈಯನ್ನು ಎತ್ತಿರಿ. ಒಳ್ಳೆಯ ಯಾತ್ರೆಯನ್ನು ಮಾಡಿದ್ದೀರಿ. ನಾಲ್ಕೂ ಕಡೆ ಒಳ್ಳೆಯ ಸೇವೆಯು ಆಯಿತು. ಆದ್ದರಿಂದ ಬಹಳ, ಬಹಳ ಧನ್ಯವಾದಗಳು. ಅಧರ್ ಕುಮಾರರ ವಿಶೇಷತೆ ಏನು? ಅಧರ್ ಕುಮಾರರು ವಿಶ್ವದಲ್ಲಿರುವ ಆತ್ಮರ ಭ್ರಾಂತಿಯನ್ನು ಕಳೆದಿದ್ದಾರೆ. ಅದು ಏನೆಂದರೆ ಪ್ರಜೆಗಳು ಬ್ರಾಹ್ಮಣರಾಗುವುದು ಅರ್ಥಾತ್ ಮನೆಯನ್ನು, ಗ್ರಹಸ್ಥವನ್ನು ಬಿಟ್ಟುಬಿಡಬೇಕು ಎಂದು ತಿಳಿಯುತ್ತಿದ್ದರು. ಆದರೆ ಅಧರ್ ಕುಮಾರರು ಕುಮಾರರನ್ನು ನೋಡಿ ಪ್ರೇರಣೆಯನ್ನು ಪಡೆಯುತ್ತಿದ್ದಾರೆ. ನಾವು ಸಹ ಬ್ರಾಹ್ಮಣರಾಗಬಲ್ಲೆವು ಎಂದು ತಿಳಿಯುತ್ತಿದ್ದಾರೆ. ಮೊದಮೊದಲು ಅವರು

ಸಹ ಬ್ರಾಂತಿಯಲ್ಲಿ ಇರುತ್ತಿದ್ದರು. ಬ್ರಹ್ಮಕುಮಾರಿಯರ ಹತ್ತಿರ ಯಾರೂ ಹೋಗಬಾರದು ಎಂದುಕೊಳ್ಳುತ್ತಿದ್ದರು. ಅವುಗಳನ್ನು ಈಗ ನೀವು ದೂರ ಮಾಡಿದ್ದೀರಿ. ಅರ್ಥಾತ್ ಅದರ್ ಕುಮಾರರು ಸೇವಾ ವೃದ್ಧಿಯ ದ್ವಾರವನ್ನು ತೆಗೆದಿದ್ದೀರಿ. (ಇನ್ನೂ ಚೆನ್ನಾಗಿ ಚಪ್ಪಾಳೆಯನ್ನು ಹೊಡೆಯಿರಿ) ಆದ್ದರಿಂದ ಅಧರ್ ಕುಮಾರರು ಸಹ ಕಡಿಮೆ ಏನಲ್ಲ. ಬಾಪ್‌ದಾದಾರವರ ಹತ್ತಿರ ಪ್ರತಿಯೊಂದು ವರ್ಗಕ್ಕೆ ಬ್ರಾಹ್ಮಣ ಜೀವನದಲ್ಲಿ ಶ್ರೇಷ್ಠತೆ ಇದೆ. ಒಳ್ಳೆಯದು. ಚಿಕ್ಕ ಮಕ್ಕಳು ಎಷ್ಟು ಜನ ಬಂದಿದ್ದಾರೆ? ಚಿಕ್ಕ ಮಕ್ಕಳನ್ನು ನೋಡಿ ಎಲ್ಲರೂ ಖುಷಿಪಡುತ್ತಾರೆ ಏಕೆಂದರೆ ಇಷ್ಟು ಚಿಕ್ಕವರಿದ್ದಾಗಲೇ ಎಷ್ಟು ಭಾಗ್ಯವನ್ನು ಪಡೆದಿದ್ದಾರೆ ಎಂದು. ನಾನು ಬ್ರಹ್ಮ ಕುಮಾರನು ಎಂದು ಪ್ರತಿಯೊಬ್ಬ ಚಿಕ್ಕ ಮಗುವೂ ನಶೆಯಿಂದ ಹೇಳುತ್ತಾನೆ. ಚಿಕ್ಕ ಮಕ್ಕಳು ಒಳ್ಳೆಯ ಅನುಭವಗಳನ್ನು ಹೇಳುತ್ತಾರೆ. ನಾವು ಭಗವಂತನೊಂದಿಗೆ ಮಿಲನ ಮಾಡಿಕೊಳ್ಳುತ್ತಿದ್ದೇವೆ ಎಂದು ಹೇಳುತ್ತಿರುತ್ತಾರೆ. ಆದ್ದರಿಂದಲೇ ಚಿಕ್ಕ ಮಕ್ಕಳ ವಿಷಯಗಳು ಎಲ್ಲರಿಗೂ ಇಷ್ಟ ಅನಿಸುತ್ತವೆ ಆದ್ದರಿಂದ ನೀವು ಚಿಕ್ಕವರಾದರೂ ಸೇವೆಗೆ ನಿಮಿತ್ತವಾದ ಬಹಳಷ್ಟು ಒಳ್ಳೆಯವರು ಆದ್ದರಿಂದ ಚಿಕ್ಕ ಮಕ್ಕಳೆಲ್ಲರಿಗೂ ಬಹಳ ಬಹಳ ಬಹಳ ಬಹಳ ಪ್ರೀತಿಯನ್ನು ಕೊಡುತ್ತಿದ್ದಾರೆ. ಒಳ್ಳೆಯದು. ಎಲ್ಲರ ಬಗ್ಗೆ ಮುಗಿಯಿತಲ್ಲವೇ. ಸೇವಾದಾರರು ಉಳಿದುಕೊಂಡಿದ್ದಾರೆ ಬಹಳ ಒಳ್ಳೆಯ ಪದ್ಧತಿಯನ್ನು ತಯಾರು ಮಾಡಿದ್ದಾರೆ. ಸೇವೆಯ ಖಾತೆಯನ್ನು ಜಮಾ ಮಾಡಿಕೊಳ್ಳಲು ಪ್ರತಿಯೊಬ್ಬರಿಗೂ ಅವಕಾಶವ ಲಭಿಸುತ್ತದೆ. ಸೇವಾಕೇಂದ್ರದಲ್ಲಿ ಸೇವೆಯನ್ನಂತೂ ಮಾಡುತ್ತಲೇ ಇರುತ್ತಾರೆ. ಆದರೆ ಯಜ್ಞ ಸೇವೆಗಾಗಿ ವಿಶೇಷವಾಗಿ ಶ್ರೇಷ್ಠತೆ ಇರುತ್ತದೆ.

ಒಳ್ಳೆಯದು ಈಗ ಒಂದು ಸೆಕೆಂಡ್ ಬಾಪ್‌ದಾದಾ ಹೇಳುತ್ತಾರೆ ಎಲ್ಲರೂ ಅಲರ್ಟಾಗಿ ಕುಳಿತುಕೊಳ್ಳಿ. ಈಗ ಎಲ್ಲರಿಗೂ ಬಾಪ್‌ದಾದಾರವರೊಂದಿಗೆ ಪ್ರೀತಿ ಇದೆ. 100% ಪ್ರೀತಿ ಇದೆಯಲ್ಲವೇ! ಪ್ರೀತಿಯಂತೂ ಪರ್ಸೆಂಟೇಜ್ ನಲ್ಲಿ ಇಲ್ಲ ತಾನೆ? 100% ಇದೆಯೇ, ಇದೆ ಅಂದಾಗ 100% ಪ್ರೀತಿ ಸರಾಸರಿ ಇದೆ ಅಲ್ಲವೇ? ಯಾರಿಗಾದರೂ ಸ್ವಲ್ಪ ಕಡಿಮೆ ಇದೆಯೆಂದರೆ ಅವರು ಕೈ ಎತ್ತಿ. ಒಂದುವೇಳೆ 100% ಪ್ರೀತಿ ಇಲ್ಲವೆಂದರೆ ಕೈ ಎತ್ತಿ, ಬಾಬಾ ಪ್ರೀತಿಯಿಂದ ಮಾತನಾಡುತ್ತಿದ್ದಾರೆ. ಇಲ್ಲಿ ಒಬ್ಬೊಬ್ಬರು ಇದ್ದಾರೆ ಆದರೂ ಪರವಾಗಿಲ್ಲ, ಪ್ರೀತಿಯಿಲ್ಲವೆಂದರೆ ನಂತರ ಪ್ರೀತಿ ಬಂದೇ ಬರುತ್ತದೆ. ಹೋಗುವುದಾದರೂ ಎಲ್ಲಿಗೆ? ಪ್ರೀತಿಯನ್ನಂತೂ ಮಾಡಲೇಬೇಕಾಗಿದೆ, ಒಳ್ಳೆಯದು. ಈಗ ಎಲ್ಲರೂ ಅಲರ್ಟ್‌ಆಗಿ ಕುಳಿತಿದ್ದೀರಲ್ಲವೇ. ಈಗ ಎಲ್ಲರೂ ತಂದೆಯ ಮೇಲಿನ ಪ್ರೀತಿಗೆ ಗುರುತಾಗಿ ಒಂದು ಕ್ಷಣದಲ್ಲಿ ಬಾಬಾರವರ ಮುಂದೆ ಅಂತರ್ಮುಖಿಯಾಗಿ ತಮಗೆ ತಾವೇ ಹೃತ್ಪೂರ್ವಕವಾಗಿ ಮನಸ್ಸಿನಲ್ಲಿ ಒಂದು ಸಂಕಲ್ಪವನ್ನು ಮಾಡಿ- ಈಗ ನಾವು ಸ್ವಯಂನ ಪ್ರತಿ ಅಥವಾ ಅನ್ಯರ ಪ್ರತಿ ಸಮಸ್ಯೆ ಆಗುವುದಿಲ್ಲವೆಂದು. ಈ ದೃಢ ಸಂಕಲ್ಪವನ್ನು ಪ್ರೀತಿಯ ಪ್ರತಿಯಾಗಿ ಮಾಡಲಾಗುತ್ತದೆಯೇ? ಮಾಡುತ್ತೀರಾ? ಯಾರು ತಿಳಿದಿದ್ದೀರಿ, ಏನೇ ಆಗಲಿ ಒಂದುವೇಳೆ ಏನೇ ಆದರೂ ಸರಿ ಕ್ಷಣದಲ್ಲಿ ಸ್ವಯಂನ್ನು ಪರಿವರ್ತನೆ ಮಾಡಿಕೊಳ್ಳುತ್ತೇವೆಂದು ಆ ಸಂಕಲ್ಪವನ್ನು ಹೃದಯದಲ್ಲಿ ದೃಢ ಮಾಡಿಕೊಳ್ಳಿ. ಬಾಪ್‌ದಾದಾ ಅದಕ್ಕೆ ಸಹಾಯ ನೀಡುತ್ತಾರೆ. ಆದರೆ ಸಹಾಯವನ್ನು ಪಡೆಯುವುದರ ವಿಧಿಯಾಗಿದೆ- ದೃಢ ಸಂಕಲ್ಪದ ಸ್ಮೃತಿ. ಬಾಪ್‌ದಾದಾರವರ ಮುಂದೆ ಸಂಕಲ್ಪ ತೆಗೆದುಕೊಂಡಿದ್ದೀರಿ, ಈ ಸ್ಮೃತಿಯ ವಿಧಿ ತಮಗೆ ಸಹಯೋಗ ನೀಡುತ್ತದೆ. ಇದನ್ನು ಮಾಡಲಾಗುತ್ತದೆಯೇ? ತಲೆ ಅಲುಗಾಡಿಸಿ, ನೋಡಿ ಸಂಕಲ್ಪದಿಂದ ಏನು ತಾನೇ ಆಗಲು ಸಾಧ್ಯವಿಲ್ಲ! ಗಾಬರಿ ಆಗಬೇಡಿ. ಬಾಪ್‌ದಾದಾರವರ ಹೆಚ್ಚಿನ ಸಹಾಯವು ಖಂಡಿತ ಸಿಗುತ್ತದೆ. ಬಾಪ್‌ದಾದಾರವರಂತೂ ತನ್ನ ಶುಭ ಸಂಕಲ್ಪವನ್ನು ಹೇಳಿದರು. ಅದನ್ನು ಈಗ ಮಾಡುವುದು ಮಕ್ಕಳ ಕರ್ತವ್ಯವಾಗಿದೆ. ಯಾರು ಎಷ್ಟು ಮಾಡುತ್ತಾರೆಯೋ

ಅಷ್ಟು ಅವರ ಖಾತೆಯಲ್ಲಿ ಜಮಾ ಆಗುತ್ತದೆ, ಬಾಪ್‌ದಾದಾರವರು ತಿಳಿದುಕೊಂಡಿದ್ದಾರೆ- ಎಲ್ಲಾ ಮಕ್ಕಳ ಖಾತೆಯು ಇಡೀ ಕಲ್ಪಕ್ಕಾಗಿ ಇಷ್ಟೊಂದು ಜಮಾ ಆಗಲಿ. ರಾಜ್ಯವನ್ನು ಮಾಡಲಿ ಮತ್ತು ಅರ್ದಕಲ್ಪ ಪೂಜ್ಯರೂ ಸಹ ಆಗಲಿ, ಪೂಜ್ಯರಾಗುವ ಖಾತೆ ಮತ್ತು ರಾಜ್ಯಾಧಿಕಾರಿ ಆಗುವ ಖಾತೆ ಈ ಎರಡು ಜಮಾ ಆಗಲಿ. ಯಾವುದೇ ಮಗುವಿನ ಖಾತೆ ಕಡಿಮೆ ಆಗಬಾರದು. ಎಲ್ಲವೂ ತುಂಬಿರಲಿ, ಸಂಪನ್ನವಾಗಿರಲಿ, ಸಂಪೂರ್ಣವಾಗಿರಲಿ ಇದನ್ನೇ ಬಾಬಾ ಇಷ್ಟ ಪಡುತ್ತಾರೆ. ಒಳ್ಳೆಯದು ಇಂದು ವಿಜ್ಞಾನದ ಸಾಧನಗಳಿಂದ ದೂರ ದೂರದಲ್ಲಿರುವ ಮಕ್ಕಳೂ ಸಹ ನೋಡುತ್ತಿದ್ದಾರೆ. ಕೇಳುತ್ತಿದ್ದಾರೆ (ಇಂದು ಬಾಪ್‌ದಾದಾರವರ ಮುರಳಿಯನ್ನು ಟೀ.ವಿ ಯಲ್ಲಿ ಮತ್ತು ವಿದೇಶದಲ್ಲಿ ಇಂಟರ್ನೆಟ್ ಮೂಲಕ ಕೇಳುತ್ತಿದ್ದಾರೆ ಹಾಗೂ ನೋಡುತ್ತಿದ್ದಾರೆ), ಆ ಎಲ್ಲಾ ಮಕ್ಕಳನ್ನು ಬಾಪ್‌ದಾದಾರವರು ನೋಡುತ್ತಿದ್ದಾರೆ. ಒಳ್ಳೆಯದು ಎಲ್ಲಾ ಮಕ್ಕಳಿಗೆ ಬಾಪ್‌ದಾದಾ ಮಿಲನದ ಮೇಳದ ಅಭಿನಂದನೆಯನ್ನು ತಿಳಿಸುತ್ತಿದ್ದಾರೆ. ಭಲೇ ಕೆಲವರು ಪತ್ರದ ಮೂಲಕ ಮಿಲನದ ಮೇಳವನ್ನು ಆಚರಿಸಿರಬಹುದು, ಅಥವಾ ಸಮ್ಮುಖದಲ್ಲಿ ಮಿಲನ ಮಾಡಿರಬಹುದು, ಅಥವಾ ತನ್ನ ಸ್ಥಾನದಲ್ಲಿದ್ದು ಮಿಲನವನ್ನು ಮಾಡಿರಬಹುದು. ನಾಲ್ಕೂ ಕಡೆಯ ಒಬ್ಬೊಬ್ಬ ಮಗುವೂ ಸಹ ಬಾಪ್‌ದಾದಾರವರಿಗೆ ಅತಿ ಪ್ರಿಯವಾಗಿದ್ದಾರೆ. ಬಾಪ್‌ದಾದಾ ಒಬ್ಬೊಬ್ಬ ಮಗುವನ್ನೂ ನೋಡಿ ಅತೀ ಹರ್ಷಿತರಾಗುತ್ತಿದ್ದಾರೆ. ಮಕ್ಕಳು ಹೇಳುತ್ತಾರೆ- ಮಕ್ಕಳ ಪ್ರೀತಿ ಎಣಿಸಲು ಸಾಧ್ಯವಿಲ್ಲ, ವರ್ಣನೆ ಮಾಡಲು ಸಾಧ್ಯವಿಲ್ಲವೆಂದು. ಹಾಗೆಯೇ ತಂದೆ ಕೂಡ ಹೇಳುತ್ತಾರೆ- ಸಿಕಿಲದೆ(ಮರಳಿ ಸಿಕ್ಕಿರುವಂತಹ), ಮುದ್ದಾದ ಮಕ್ಕಳು, ವಿಶೇಷ ಆತ್ಮರು ಮಕ್ಕಳ ಮೇಲಿನ ಪ್ರೀತಿಯನ್ನು ವರ್ಣನೆ ಮಾಡಲು ಸಾಧ್ಯವಿಲ್ಲ. ಇಂತಹ ಮಕ್ಕಳು ಇಡೀ ಕಲ್ಪದಲ್ಲಿ ಯಾರಿಗೂ ಸಹ ಸಿಗುವುದಿಲ್ಲ.

**ಇಂತಹ ಸರ್ವ ತೀವ್ರ ಪುರುಷಾರ್ಥಿ ಶ್ರೇಷ್ಠ ಆತ್ಮರಿಗೆ, ಸದಾ ತಂದೆಯ ಪ್ರೀತಿಯ ಮರುಪಾವತಿ ಮಾಡುವ ಸಾಹಸವಂತ ಮಕ್ಕಳಿಗೆ, ಸದಾ ತಮ್ಮ ವಿಶೇಷತೆಯ ಮೂಲಕ ಅನ್ಯರನ್ನೂ ಸಹ ವಿಶೇಷ ಆತ್ಮರನ್ನಾಗಿ ಮಾಡುವಂತಹ ಪುಣ್ಯಾತ್ಮ ಮಕ್ಕಳಿಗೆ, ಸದಾ ಸಮಸ್ಯೆಯಿಂದ ಸಮಾಧಾನ ಸ್ವರೂಪರಾಗಿ ಮುಂದೆ ಹಾರುವಂತಹ ಮಕ್ಕಳಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 25-11-2001.

***ಆಶೀರ್ವಾದಗಳನ್ನು ಕೊಡಿ ಮತ್ತು ಆಶೀರ್ವಾದಗಳನ್ನು ತೆಗೆದುಕೊಳ್ಳಿರಿ,  ಕಾರಣದ ನಿವಾರಣೆ ಮಾಡಿ ಸಮಸ್ಯೆಗಳನ್ನು ಪರಿಷ್ಕಾರ ಮಾಡಿರಿ.***

ಯಾವಾಗಲಾದರೂ ಯಾವ  ಕಾರಣವಾದರೂ ಸಮ್ಮುಖದಲ್ಲಿ ಬಂದಾಗ ಒಂದು ಕ್ಷಣದಲ್ಲಿ ನಿವಾರಣೆಯನ್ನು ಯೋಚಿಸಿ. ವಿಶ್ವದ ನಿವಾರಣೆಯನ್ನು ಮಾಡಲಾದಾಗ ನನ್ನ ಸಣ್ಣ ಸಣ್ಣ ಕಾರಣಗಳನ್ನು ನಿವಾರಣೆ ಮಾಡಲಾಗುವುದಿಲ್ಲವೇ? ಎಂದು ಯೋಚಿಸಿ. ಮಾಡಲಾಗುವುದಿಲ್ಲವೇ?  ಈಗಂತೂ ಆತ್ಮರ ಕ್ಯೂ ತಮ್ಮ ಮುಂದೆ ಬರುತ್ತದೆ. ಹೇ ಮುಕ್ತಿದಾತ! ಮುಕ್ತಿಯನ್ನು ನೀಡಿ ಎಂದು ಕೇಳುತ್ತಾರೆ. ಏಕೆಂದರೆ ನೀವು ಮುಕ್ತಿದಾತನ ಡೈರೆಕ್ಟ್ ಮಕ್ಕಳು, ಅಧಿಕಾರಿ ಮಕ್ಕಳಾಗಿದ್ದೀರಿ. ಮಾಸ್ಟರ್ ಮುಕ್ತಿದಾತರಲ್ಲವೇ! ಆದರೆ ನಿಮ್ಮ ಮುಂದೆ (ಕ್ಯೂ)ಏಕೆ? ಎನ್ನುವ ಕ್ಯೂ ತಯಾರಾಗಿ ಬಿಟ್ಟಿದೆ. ಪುರುಷಾರ್ಥದಲ್ಲಿ ಈ ಏಕೆ? ಎಂಬ ಶಬ್ದವು ಅನೇಕ ಕ್ಯೂಗಳನ್ನು ಜೊತೆ ತರುತ್ತದೆ ಮತ್ತು ಬಾಗಿಲು ಮುಚ್ಚಿಬಿಡುತ್ತದೆ. ಆದ್ದರಿಂದ ಬಾಪ್‌ದಾದಾ ಈಗ

ದೇಶವಿದೇಶದ ಮಕ್ಕಳೆಲ್ಲರಿಗೂ ಇದೇ ಸ್ಮೃತಿಯನ್ನು ಕೊಡುತ್ತಿದ್ದಾರೆ. ನೀವು ಸಮಸ್ಯೆಗಳ ಬಾಗಿಲಾದ ಏಕೆ? ಎಂಬ ವಿಷಯವನ್ನು ಸಮಾಪ್ತಿ ಮಾಡಿರಿ. ಎನ್ನುತ್ತಾ ಭಾಗ್ಯವಂತರಾದ ಮಕ್ಕಳೊಂದಿಗೆ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಂದೆಯ ಮುಖಾಂತರ ವಿಶ್ವಕಲ್ಯಾಣಕಾರಿಯಾಗಿ, ವಿಶ್ವರಾಜ್ಯಾಧಿಕಾರಿಯಾಗುವ ಶಕ್ತಿ ಸೇನೆಯಾಗಿದ್ದೇನೆ.

2. ನಾನು ನಡೆದಾಡುತ್ತಾ, ತಿರುಗಾಡುತ್ತಾ, ಸಂಬಂಧ ಸಂಪರ್ಕದಲ್ಲಿ ಬರುತ್ತಲೂ ಪ್ರತಿಯೊಬ್ಬ ಆತ್ಮನಿಗೆ ಮನಸ್ಸಿನಿಂದ ಶುಭ ಭಾವನೆಯ ಆಶೀರ್ವಾದಗಳನ್ನು ಕೊಡುತ್ತಿದ್ದೇನೆ ಮತ್ತು ಅನ್ಯರಿಂದಲೂ ಆಶೀರ್ವಾದಗಳನ್ನು ಪಡೆಯುತ್ತಿದ್ದೇನೆ.

3. ನಾನು ವಿಕಾರಕ್ಕೆ ವಶೀಭೂತವಾದ ಆತ್ಮನ ಪ್ರತಿ ಅಥವಾ ಪರಿವಶವಾದ ಆತ್ಮನ ಪ್ರತಿ ಶುಭ ಭಾವನೆಯಿಂದ ಸಹಯೋಗವನ್ನು ಕೊಡುತ್ತಿದ್ದೇನೆ.

4. ನಾನು ಸಂಕಲ್ಪ, ಮಾತು, ಕರ್ಮ, ಸಂಬಂಧ-ಸಂಪರ್ಕಗಳ ಮೂಲಕ ಆಶೀರ್ವಾದಗಳನ್ನು ಕೊಡಬೇಕು ಮತ್ತು ತೆಗೆದುಕೊಳ್ಳಬೇಕು ಎಂಬ ನನ್ನ ಕರ್ತವ್ಯವನ್ನು ಸ್ಮೃತಿಯಲ್ಲಿಟ್ಟುಕೊಂಡಿದ್ದೇನೆ.

5. ನಾನು ಕಾರಣ ಎಂಬ ಶಬ್ದವನ್ನು ಸಮಾಪ್ತಿ ಮಾಡಿ ನಿವಾರಣಾ ಸ್ವರೂಪವಾಗಿ ವಿಶ್ವದಲ್ಲಿರುವ ಆತ್ಮರಿಗೆ ಮುಕ್ತಿಯ ವಾರಸತ್ವವನ್ನು ಕೊಡುವ ಮುಕ್ತಿದಾತನಾಗಿದ್ದೇನೆ.

6. ನಾನು ಮಾಸ್ಟರ್ ಮುಕ್ತಿದಾತನು.

7. ನಾನು ಸಹಿಸಬೇಕಾಗಿ ಬಂದರೂ, ಮಾಯೆಯನ್ನು ಎದುರಿಸಬೇಕಾಗಿ ಬಂದರೂ, ಪರಸ್ಪರ ಸಂಬಂಧ ಸಂಪರ್ಕದಲ್ಲಿ ಸಹಿಸಬೇಕಾಗಿ ಬಂದರೂ ಕಾರಣವನ್ನು ಸಮಾಪ್ತಿ ಮಾಡಿ ನಿವಾರಣಾ ಸ್ವರೂಪವಾಗಲೇಬೇಕು ಎಂಬ ದೃಢಸಂಕಲ್ಪಧಾರಿಯಾಗಿದ್ದೇನೆ.

8. ನಾನು ಮಾಸ್ಟರ್ ಸರ್ವ ಶಕ್ತಿವಂತನು ಮತ್ತು ವಿಶ್ವಕಲ್ಯಾಣ ಕಾರಿಯಾಗಿದ್ದೇನೆ.

9. ನಾನು ಪ್ರತಿಯೊಂದು ಶಕ್ತಿಯನ್ನು ಸಮಯಕ್ಕೆ ಆಜ್ಞೆಯ ಪ್ರಮಾಣ ನಡೆಸಿ, ಕಾರ್ಯದಲ್ಲಿ ಉಪಯೋಗಿಸುವ ಮಾಸ್ಟರ್ ಸರ್ವ ಶಕ್ತಿವಂತನು.

10. ನಾನು ಬ್ರಾಹ್ಮಣ ಜೀವನದಲ್ಲಿ ಖುಷಿಯಿಂದ ನೃತ್ಯ ಮಾಡುತ್ತಾ ನನ್ನ ಭಾಗ್ಯದ ಮತ್ತು ಭಗವಂತನ ಗೀತೆಯನ್ನು ಹಾಡುತ್ತಿದ್ದೇನೆ.

11. ವಿಶ್ವವೆಂಬ ವೇದಿಕೆಯ ಮೇಲೆ ಮಕ್ಕಳಾದ ನಾವೆಲ್ಲರೂ ತಂದೆಯ ಸಮಾನವಾಗಿ ಸೂಕ್ಷ್ಮ ದೇವತೆಯಾಗಿ ಪ್ರತ್ಯಕ್ಷವಾಗಿದ್ದೇವೆ.

12. ನಾನು ಮನಸ್ಸಿನಿಂದ ನನ್ನ ತಂದೆ, ನನ್ನ ತಂದೆ ಎಂಬ ಹಾಡನ್ನು ಹಾಡಿಕೊಳ್ಳುತ್ತಿದ್ದೇನೆ .

13. ನನಗೆ ತಂದೆಯ ಮೇಲೆ ಇರುವ ಪ್ರೀತಿಗೆ ಗುರುತಾಗಿ ಒಂದು ಕ್ಷಣ ತಂದೆಯ ಎದುರಿಗೆ ಅಂತರ್ಮುಖಿಯಾಗಿ ಕುಳಿತು ನಾನು ಸ್ವಯಂನ ಪ್ರತಿ ಅಥವಾ ಅನ್ಯರ ಪ್ರತಿ ಸಮಸ್ಯೆಯಾಗುವುದಿಲ್ಲ, ಸ್ವಯಂನ್ನು ಪರಿವರ್ತನೆ ಮಾಡಿಕೊಳ್ಳುತ್ತೇನೆ ಎಂದು ಹೃತ್ಪೂರ್ವಕವಾಗಿ ದೃಢಸಂಕಲ್ಪ ಮಾಡಿದ್ದೇನೆ.

14. ನಾನು ಇಡೀ ಕಲ್ಪಕ್ಕೆ ಪೂಜ್ಯವಾಗುವ ಖಾತೆಯನ್ನು ಮತ್ತು ರಾಜ್ಯಾಧಿಕಾರಿಯಾಗುವ ಖಾತೆ ಎರಡನ್ನೂ ಜಮಾ ಮಾಡಿಕೊಂಡು ಸಂಪನ್ನವಾಗಿ,  ಸಂಪೂರ್ಣವಾಗಿದ್ದೇನೆ.